# ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ

ಪ್ರಧಾನ ಕಛೇರಿ : # 7/29, 3ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು–560019.
ದೂರವಾಣಿ ಸಂಖ್ಯೆ : 080–22428985, 26507976

ಸ್ಥಾಪನೆ : 1965

ಸಂಖ್ಯೆ : ಹೆಚ್‌ಸಿಬಿ/162/2024–25 ದಿನಾಂಕ : 27–06–2024

## ನೋಂದಾಯಿತ ಅಂಚೆ ಮೂಲಕ ನೋಟೀಸ್

(ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960 ರ ನಿಯಮ 13D (2-A)(ii) ರ ಪ್ರಕಾರ)

ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು ಇದರ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿ ಚುನಾವಣೆಯನ್ನು ದಿನಾಂಕ 16–02–2025 ರೊಳಗೆ ಜರುಗಿಸಬೇಕಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ಕಾಯಿದೆ 2021 ರ ಕಲಂ 20(2)(a-iv) ರಂತೆ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗಲು ವಿಫಲರಾದಲ್ಲಿ ಅಥವಾ ಕಲಂ 20(2)(a-v) ರಂತೆ ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ವಿಫಲರಾದ ಸದಸ್ಯರು ಬ್ಯಾಂಕಿನ ಚುನಾವಣೆಯಲ್ಲಿ ಮತ ಚಲಾಯಿಸಲು ಹಕ್ಕನ್ನು ಹೊಂದಿರುವುದಿಲ್ಲ.

ಅದರಂತೆ :

1. ಬ್ಯಾಂಕಿನ ಹಿಂದಿನ 5 ವಾರ್ಷಿಕ ಸಾಮಾನ್ಯ ಸಭೆಗಳು ಅಂದರೆ ದಿನಾಂಕಗಳು 22–09–2019, 19–12–2020, 27–11–2021, 18–09–2022 ಹಾಗೂ 10–09–2023 ರಲ್ಲಿ ನಡೆದ ವಾರ್ಷಿಕ ಸಭೆಗಳನ್ನು ಪರಿಗಣಿಸಿದ್ದು, ಇದರಲ್ಲಿ ಕನಿಷ್ಠ 2 ವಾರ್ಷಿಕ ಸಾಮಾನ್ಯ ಸಭೆಗಳಿಗೆ ಹಾಜರಾಗಲು ನೀವು ವಿಫಲರಾಗಿರುತ್ತೀರಿ. **ಅಥವಾ**

2. ಬ್ಯಾಂಕಿನ ಉಪನಿಯಮ ಸಂಖ್ಯೆ 20, 21.5(1)(4) ಹಾಗೂ 45(5) ರಲ್ಲಿ ವಿವರಿಸಿದಂತೆ ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆ / ಸೌಲಭ್ಯಗಳಾದ ಷೇರು ಧನ ರೂ.1000/– ಹೊಂದಿರುವುದು ಹಾಗೂ ಹಿಂದಿನ ಐದು ಆರ್ಥಿಕ ವರ್ಷಗಳಲ್ಲಿ ಅಂದರೆ 2019–20, 2020–21, 2021–22, 2022–23 ಹಾಗೂ 2023–24. ಪೈಕಿ ಯಾವುದೇ ಎರಡು (2) ಸಹಕಾರಿ ವರ್ಷಗಳಲ್ಲಿ ಚಾಲ್ತಿ ಯಾ ಉಳಿತಾಯ ಖಾತೆ ಅಥವಾ ಇತರೆ ಖಾತೆಯಲ್ಲಿ ಬಡ್ಡಿ ಜಮಾ ಸೇರಿದಂತೆ ಕನಿಷ್ಠ ಒಂದು ವ್ಯವಹಾರ ಮಾಡುವುದು ಕಡ್ಡಾಯ. ಈ ಸೇವೆಗಳಲ್ಲಿ ಯಾವುದಾದರು ಒಂದನ್ನು ಉಪಯೋಗಿಸಿಕೊಳ್ಳಲು ವಿಫಲರಾಗಿರುತ್ತೀರಿ.

ಮೇಲೆ ವಿವರಿಸಿದ ಕಾರಣಕ್ಕೆ ತಮ್ಮನ್ನು ಅನರ್ಹ ಮತದಾರರ ಪಟ್ಟಿಯಲ್ಲಿ ಇರಿಸಿ ಈ ನೊಟೀಸು ಜಾರಿ ಮಾಡಲಾಗಿದೆ. ಇದಕ್ಕೆ ನಿಮ್ಮ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ನೊಟೀಸ್ ದಿನಾಂಕದಿಂದ ಅಥವಾ ನೋಂದಾಯಿತ ಅಂಚೆ ದಿನಾಂಕದಿಂದ ಗರಿಷ್ಠ 15 ದಿನಗಳೊಳಗೆ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಿಗೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಿಗೆ ಆಕ್ಷೇಪಣೆ ಸಲ್ಲಿಸಿದ ಸದಸ್ಯರು ಈ ನೊಟೀಸ್ ದಿನಾಂಕದಿಂದ ಅಥವಾ ನೋಂದಾಯಿತ ಅಂಚೆ ದಿನಾಂಕದಿಂದ ಗರಿಷ್ಠ 30 ದಿನದಿಂದ 60 ದಿನಗಳೊಳಗೆ ಚುನಾವಣಾಧಿಕಾರಿಯ ಮುಂದೆ ನೀವು ಹಾಜರಾಗಿ ಪರಿಹಾರವನ್ನು ಕಂಡುಕೊಳ್ಳಲು ಕರ್ನಾಟಕ ಸಹಕಾರ ಸಂಘಗಳ ನಿಯಾಮವಳಿ 1960 ರ ನಿಯಮ 13D (2-A)(ii) ರ ಪ್ರಕಾರ ನಿಮಗೆ ಅವಕಾಶವಿರುತ್ತದೆ.

ಸಹಿ/–
ಎಸ್.ಹೆಚ್. ಸುಜಾತ
ಮುಖ್ಯ ಕಾರ್ಯನಿರ್ವಾಹಕರು (ಪ್ರಭಾರ)

**ನೊಂದಾಯಿತ ಅಂಚೆ**

ಗೆ,

ಶ್ರೀಮತಿ / ಶ್ರೀ

ಇಂದ :

**ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ**

ಪ್ರಧಾನ ಕಛೇರಿ : # 7/29, 3ನೇ ಮುಖ್ಯರಸ್ತೆ,
1ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು–560019.
ದೂರವಾಣಿ ಸಂಖ್ಯೆ : 080–22428985, 26507976

ಸ್ಥಾಪನೆ : 1965